**ದಿನಾಂಕಃ 25-03-2025 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣ ವಚನವನ್ನು ಬೋಧಿಸಲಾಯಿತು.**

**ಮುಂದುವರೆದ ಪಾಟೀ ಸವಾಲು: 1 ಮತ್ತು 2 ನೇ ಆರೋಪಿತರ ಪರ ವಕೀಲರಾದ ಶ್ರೀ.ಪಿ.ಆರ್.ಕೆ. ವಕೀಲರಿಂದಃ**

ಬಿಲ್ಲನ್ನು ಆರೋಪಿತರಿಗೆ ತಲುಪಿಸಿದ ಬಗ್ಗೆ ಯಾವುದೇ ದಾಖಲೆ ನ್ಯಾಯಾಲಯಕ್ಕೆ ಹಾಜರು ಪಡಿಸಿರುವುದಿಲ್ಲ. ಲಾರಿ ಜೊತೆ ಬಿಲ್ಲು ಕಳುಹಿಸಿದಾಗ ಸ್ವೀಕೃತಿ ಪಡೆಯುವುದಿಲ್ಲ. ಮಾಲು ಆರೋಪಿತರಿಗೆ ತಲುಪಿದ ಬಗ್ಗೆ ಮತ್ತು ಬಿಲ್ ಮುಟ್ಟಿದ ಬಗ್ಗೆ ಯಾವುದೇ ದಾಖಲೆ ನ್ಯಾಯಾಲಯಕ್ಕೆ ಹಾಜರು ಪಡಿಸಿರುವುದಿಲ್ಲ. ಆರೋಪಿತರು ನನ್ನ ಬಳಿ ಯಾವುದೇ ಮಾಲನ್ನು ಖರೀದಿ ಮಾಡಿಲ್ಲ ಮತ್ತು ನಾನು ಅವರಿಗೆ ಯಾವುದೇ ಬಿಲ್ಲನ್ನು ಕೊಟ್ಟಿಲ್ಲ ಹಾಗೂ ನಾನು ಆರೋಪಿತರಿಗೆ ಯಾವುದೇ ಮಾಲನ್ನು ಡಿಲೆವರಿ ಕೊಟ್ಟಿಲ್ಲ ಆ ಕಾರಣಕ್ಕಾಗಿ

ನನ್ನ ಬಳಿ ಯಾವುದೇ ದಾಖಲೆ ಇಲ್ಲ ಎಂದರೆ ಸರಿಯಲ್ಲ.

ಆರೋಪಿತರ ಆಸ್ತಿಗಳನ್ನು ವರ್ತಕರ ಸಂಘದವರಿಗೆ ಕೊಟ್ಟಿರುತ್ತಾರೆ ಎಂದರೆ ಸಾಕ್ಷಿ ಅದು ನನಗೆ ಗೊತ್ತಿರುವುದಿಲ್ಲ ಎಂದು ಹೇಳುತ್ತಾರೆ. ಯಾರಾದರೂ ಇನಸಾಲವೆಂಟ್ ಆದರೆ ಅವರ ಆಸ್ತಿಗಳನ್ನು ವರ್ತಕರ ಸಂಘದವರು ತೆಗೆದು ಕೊಂಡು ಅವರು ಕೊಡಬೇಕಾದವರಿಗೆ ಹಣ ಮುಟ್ಟಿಸುವ ಪದ್ಧತಿ ಇದೆ ಎಂದರೆ ಸರಿ. ಸದರಿ ಆಸ್ತಿಗಳನ್ನು ಮಾರಾಟ ಮಾಡಿ ಬಂದ ಹಣದಲ್ಲಿ ಕೊಡಬೇಕಾದವರಿಗೆ ಪ್ರೊಪೋರ್ಸಿನೇಟ್ ಆಗಿ ಕೊಡುತ್ತಾರೆ ಎಂದರೆ ಸಾಕ್ಷಿ ನಾನು ನೆಹರೂ ವರ್ತಕರ ಸಂಘದಲ್ಲಿ ಸದಸ್ಯನಾಗಿರದ ಕಾರಣ ಅದು ನನಗೆ ಅನ್ವಯಿಸುವುದಿಲ್ಲ ಎಂದು ಹೇಳುತ್ತಾರೆ. ಆರೋಪಿತರ ಸಂಸ್ಥೆ ಇನ್ಸಾಲ್ವೆಂಟ್ ಆದ ಸುದ್ದಿ ಕೇಳಿ ಎಲ್ಲರು ಅವರ ಅಂಗಡಿಗೆ ನುಗ್ಗಿ ದಾಖಲೆಗಳನ್ನು ತೆಗೆದು ಕೊಂಡು ಹೋದ ಬಗ್ಗೆ ಪೋಲಿಸ್ ಠಾಣೆಗೆ ವಿಚಾರ ಹೋಗಿರುತ್ತದೆ ಎಂದರೆ ಸಾಕ್ಷಿ ಅದು ನನಗೆ ಗೊತ್ತಿಲ್ಲ ಎಂದು ಹೇಳುತ್ತಾರೆ. ಆರೋಪಿತರಿಗೆ ಸಂಬಂಧಪಟ್ಟ ಕೆಲವು ದಾಖಲೆಗಳು ನೆಹರೂ ವರ್ತಕರ ಸಂಘದಲ್ಲಿ ಇರುವ ವಿಚಾರ ನನಗೆ ಗೊತ್ತಿರುವುದಿಲ್ಲ. ಆರೋಪಿತರ ಅಂಗಡಿಯಿಂದ ಕಾಗದ ಪತ್ರಗಳು ಮತ್ತು ಚೆಕ್ ಬುಕ್ ತೆಗೆದು ಕೊಂಡು ಹೋಗಿದ್ದನ್ನು ಕೆಲವರು ವಾಪಸ್ಸು ಕೊಟ್ಟಿರುತ್ತಾರೆ ಇನ್ನೂ ಕೆಲವರು ವಾಪಸ್ಸು ಕೊಟ್ಟಿಲ್ಲ ಎಂದರೆ ಸಾಕ್ಷಿ ಅದು ನನಗೆ ಗೊತ್ತಿಲ್ಲ ಎಂದು ಹೇಳುತ್ತಾರೆ. ಆ ರೀತಿ ವಾಪಸ್ಸು ಕೊಡದ ಚೆಕ್ ಗಳಲ್ಲಿ ಇದೂ ಒಂದು ಚೆಕ್ ಆಗಿರುತ್ತದೆ ಎಂದರೆ ಸರಿಯಲ್ಲ ಸಾಕ್ಷಿ ಮುಂದುವರೆದು ನಾವು ಆರೋಪಿಗೆ ಮಾಲು ಸರಬರಾಜು ಮಾಡಿದಾಗ ಆರೋಪಿತರು ಈ ಚೆಕ್ ಕೊಟ್ಟಿದ್ದಾರೆ ಎಂದು ಹೇಳುತ್ತಾರೆ. ವರ್ತಕರ ಸಂಘದವರು ಕಾನೂನು ಬದ್ಧವಾದ ವ್ಯವಹಾರಗಳು ಇದ್ದರೆ ಆ ಹಣವನ್ನು ಇನ್ಸಾಲವೆಂಟ್ ಆದವರ ಆಸ್ತಿಯಿಂದ ಬಂದ ಪ್ರತಿಫಲದಲ್ಲಿ ಶೇಕಡಾವರಿನಂತೆ ತೀರಿಸುತ್ತಾರೆ ಎಂದರೆ ಸರಿ. ನನ್ನ ಬಳಿ ಆರೋಪಿತರಿಗೆ ಮಾಲು ಸರಬರಾಜು ಮಾಡಿದ ಬಗ್ಗೆ ಮತ್ತು ಅವರು ನನ್ನಿಂದು ಮಾಲು ಖರೀದಿ ಮಾಡಿದ ಬಗ್ಗೆ ಸೂಕ್ತ ದಾಖಲೆಗಳು ಇಲ್ಲದ ಕಾರಣ ನೆಹರೂ ವರ್ತಕರ ಸಂಘದವರು ನನಗೆ ಯಾವುದೇ ಹಣ ಪಾವತಿ ಮಾಡಿರುವುದಿಲ್ಲ ಎಂದರೆ ಸಾಕ್ಷಿ ನಾನು ನೆಹರೂ ವರ್ತಕರ ಸಂಘದಲ್ಲಿ ಸದಸ್ಯನಾಗಿರದ ಕಾರಣ ಅದು ನನಗೆ ಸಂಬಂಧಪಟ್ಟಿಲ್ಲ ಎಂದು ಹೇಳುತ್ತಾರೆ. ಇನ್ನೂ

ಯಾರಿಗೂ ಹಣ ಕೊಟ್ಟಿಲ್ಲ ಎಂದು ಹೇಳುತ್ತಾರೆ. ಆ ರೀತಿ ಆರೋಪಿತರ ಅಂಗಡಿಯಿಂದ ತೆಗೆದು ಕೊಂಡು ಹೋದ ಚೆಕ್ ಗಳಲ್ಲಿ ಒಂದು ಚೆಕ್ ನ್ನು ದುರುಪಯೋಗ ಪಡಿಸಿಕೊಂಡು ಆರೋಪಿತರು ಯಾವುದೇ ಹಣ ಕೊಡಬೇಕಾಗಿಲ್ಲದೇ ಇದ್ದರೂ ಸಹ ಸುಳ್ಳು ಕೇಸು ಹಾಕಿರುತ್ತೇನೆ ಎಂದರೆ ಸರಿಯಲ್ಲ. ನಾನು ಆ ಚೆಕ್ ನ್ನು ಭರ್ತಿ ಮಾಡಿಕೊಂಡು ಆರೋಪಿತರಿಗೆ ಗೋವಿನ ಜೊತ ಸರಬರಾಜು ಮಾಡಿದ್ದೆ ಅದರ ಬಾಬ್ತು ಹಣ ಪಾವತಿಗಾಗಿ ಚೆಕ್ ಕೊಟ್ಟಿದ್ದಾರೆ ಎಂದು ಸುಳ್ಳು ಕೇಸು ಹಾಕಿ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿತರು ನನಗೆ ಯಾವುದೇ ಹಣ ಕೊಡಬೇಕಾಗಿಲ್ಲ ಮತ್ತು ಯಾವುದೇ ಚೆಕ್ ಕೊಟ್ಟಿಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಏನೂ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ.)

ಓ. ಹೇ. ಕೇ. ಸರಿ ಇದೆ.

2 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು,
ಮತ್ತು ಜೆ.ಎಂ.ಎಫ್.ಸಿ ರಾಣೇಬೆನ್ನೂರು.